# <u>ಕರ್ನಾಟಕ ವಿಧಾನ ಪರಿಷತ್ತು</u>

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಎಂ.ಎಲ್. ಅನಿಲ್ ಕುಮಾರ್**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 685**

**ಉತ್ತರಿಸಬೇಕಾದ ದಿನಾಂಕ : 22-02-2022**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ರೈತರಿಗೆ ವಿತರಿಸುವ ಸಾಲಕ್ಕೆ ವಿಧಿಸಿರುವ ಬಡ್ಡಿ ದರವೆಷ್ಟು; (ವಿವರ ನೀಡುವುದು) | ರಾಜ್ಯದ ರೈತರಿಗೆ ಕೃಷಿ ಪತ್ತಿನ ಸಹಕಾರ ಸಂಘಗಳು ವಿತರಿಸುವ ಸಾಲಗಳಿಗೆ ವಿಧಿಸುವ ಬಡ್ಡಿ ದರ<br>1. **<u>ಅಲ್ಪಾವಧಿ ಬೆಳೆ ಸಾಲ:-</u>**<br>2020-21 ನೇ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ನಿಗದಿತ ಅವಧಿಯಲ್ಲಿ ಮರುಪಾವತಿಸುವ ರೈತರಿಗೆ ರೂ.3.00 ಲಕ್ಷಗಳವರೆಗಿನ ಸಂಪೂರ್ಣ ಸಾಲಗಳಿಗೆ ಶೂನ್ಯ ಬಡ್ಡಿ ದರ ವಿಧಿಸಬೇಕಿರುತ್ತದೆ. ಈ ರೀತಿ ವಸೂಲಾದ ಸಾಲಗಳಿಗೆ ಕೇಂದ್ರ ಸರ್ಕಾರದಿಂದ ಶೇ.3 ಮತ್ತು ರಾಜ್ಯ ಸರ್ಕಾರದಿಂದ ಶೇ.5.6 ರ ಬಡ್ಡಿ ಸಹಾಯಧನ ಕ್ಲೇಮು ಮಾಡಬೇಕಿರುತ್ತದೆ.<br>2021-22ನೇ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ನಿಗದಿತ ಅವಧಿಯಲ್ಲಿ ಮರುಪಾವತಿಸುವ ರೈತರಿಗೆ ರೂ.3.00 ಲಕ್ಷಗಳವರೆಗಿನ ಸಾಲಗಳಿಗೆ ಶೂನ್ಯ ಬಡ್ಡಿದರ ವಿಧಿಸಬೇಕಿರುತ್ತದೆ.<br>2. **<u>ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ:-</u>** 2020-21 ನೇ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ನಿಗದಿತ ಅವಧಿಯಲ್ಲಿ ಮರುಪಾವತಿಸುವ ರೈತರಿಗೆ ರೂ.10.00 ಲಕ್ಷಗಳವರೆಗಿನ ಸಂಪೂರ್ಣ ಸಾಲಗಳಿಗೆ ಶೇ.3 ರ ಬಡ್ಡಿ ದರ ವಿಧಿಸಬೇಕಿರುತ್ತದೆ. ಈ ರೀತಿ ವಸೂಲಾದ ಸಾಲಗಳಿಗೆ ರಾಜ್ಯ ಸರ್ಕಾರದಿಂದ ಶೇ.4.8 ರ ಬಡ್ಡಿ ಸಹಾಯಧನ ಕ್ಲೇಮು ಮಾಡಬೇಕಿರುತ್ತದೆ<br>2021-22 ನೇ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ನಿಗದಿತ ಅವಧಿಯಲ್ಲಿ ಮರುಪಾವತಿಸುವ ರೈತರಿಗೆ ರೂ.10.00 ಲಕ್ಷಗಳವರೆಗಿನ ಸಾಲಗಳಿಗೆ ಶೇ.3 ರ ಬಡ್ಡಿದರ ವಿಧಿಸಬೇಕಿರುತ್ತದೆ. |

...2

| | | |
|---|---|---|
| ಆ) | ಇತ್ತೀಚೆಗೆ ರಾಜ್ಯದ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಹಲವು ಜಿಲ್ಲೆಗಳಲ್ಲಿ ರೈತರಿಗೆ ಕಿಸಾನ್ ಕ್ರೆಡಿಟ್ ಸಾಲದ ಮುಖಾಂತರ ಸಾಲ ನೀಡಿ ಅಧಿಕ ಮೊತ್ತದ ಬಡ್ಡಿ ವಸೂಲಾತಿ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ ಅಧಿಕ ಮೊತ್ತದ ಬಡ್ಡಿ ವಸೂಲಾತಿ ಮಾಡಿದ ಅಧಿಕಾರಿಗಳ ಮೇಲೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ; (ವಿವರ ನೀಡುವುದು.) | ರಾಜ್ಯದ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಹಲವು ಜಿಲ್ಲೆಗಳಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರಿಗೆ ಕೆಸಿಸಿ ಬೆಳೆ ಸಾಲ ವಿತರಿಸಿ ರೂ.3.00 ಲಕ್ಷಗಳವರೆಗಿನ ಸಾಲಗಳನ್ನು ರೈತರು ನಿಗದಿತ ಅವಧಿಯಲ್ಲಿ ಮರುಪಾವತಿಸಿದಲ್ಲಿ ಅಂತಹ ರೈತರಿಂದ ಸರ್ಕಾರ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಬಡ್ಡಿ ದರದಲ್ಲಿ ಸಾಲ ವಸೂಲು ಮಾಡುತ್ತಿರುವ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. ಆದ ಕಾರಣ ಸಹಕಾರ ಸಂಘಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.<br><br>ಆದರೆ 2020-21 ಮತ್ತು ಪೂರ್ವದಲ್ಲಿ ರೂ.3.00 ಲಕ್ಷಗಳಿಗಿಂತ ಹೆಚ್ಚಿನ ಮೊತ್ತದಲ್ಲಿ ವಿತರಿಸಿದ ಸಾಲಗಳಿಗೆ ಬೆಳಗಾವಿ, ಬಳ್ಳಾರಿ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ ಮತ್ತು ಚಿಕ್ಕಬಳ್ಳಾಪುರ, ಮೈಸೂರು, ಮತ್ತು ಶಿವಮೊಗ್ಗ ಡಿಸಿಸಿ ಬ್ಯಾಂಕಿನ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು 2021-22 ನೇ ಸಾಲಿನಲ್ಲಿ ಆಯಾ ಸಂಘ/ಬ್ಯಾಂಕಿನ ಬಂಡವಾಳದ ವೆಚ್ಚದ ಆಧಾರದ ಮೇಲೆ ಸಾಮಾನ್ಯ ಬಡ್ಡಿ ದರ ವಸೂಲು ಮಾಡುತ್ತಿರುತ್ತವೆ.<br><br>ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿಸಿಸಿ ಬ್ಯಾಂಕ್ ಈ ಸಾಲಗಳನ್ನು ಶೇ.10 ರ ಬಡ್ಡಿ ದರದಲ್ಲಿ ಸಾಲ ವಸೂಲು ಮಾಡುತ್ತಿರುತ್ತದೆ.<br><br>ಡಿಸಿಸಿ ಬ್ಯಾಂಕುವಾರು ರೂ.3.00 ಲಕ್ಷಗಳಿಗಿಂತ ಹೆಚ್ಚಿನ ಮೊತ್ತದ ಸಾಲ ವಿತರಿಸಿದ ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಇ) | ಕರೋನ ಸಂಕಷ್ಟದಿಂದ ಬೆಳೆಹಾನಿ ಮತ್ತು ಇನ್ನಿತರೆ ಸಂಕಷ್ಟದಲ್ಲಿ ಸಿಲುಕಿ ಜೀವನ ಸಾಗಿಸುತ್ತಿರುವ ರೈತರಿಗೆ ಅಕ್ರಮವಾಗಿ ಹೆಚ್ಚುವರಿ ಬಡ್ಡಿ ವಿಧಿಸಿ ಸಾಲ ವಸೂಲಾತಿ ಮಾಡುತ್ತಿರುವುದರ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು) | 2020-21 ನೇ ಸಾಲಿನಲ್ಲಿನ ಸರ್ಕಾರದ ಆದೇಶ ದನ್ವಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೂ.3.00 ಲಕ್ಷಗಳಿಗಿಂತ ಹೆಚ್ಚಿನ ಬೆಳೆ ಸಾಲಗಳಿಗೆ ಮತ್ತು ಸುಸ್ತಿ ಸಾಲಗಳಿಗೆ ಸಾಮಾನ್ಯ ಬಡ್ಡಿ ದರದಲ್ಲಿ ಸಾಲ ವಸೂಲು ಮಾಡುತ್ತಿದ್ದು, ಅಕ್ರಮವಾಗಿ ಹೆಚ್ಚಿನ ಬಡ್ಡಿ ವಸೂಲು ಮಾಡದೇ ಇರುವುದರಿಂದ ಸಹಕಾರ ಸಂಘಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.<br><br>2021-22 ನೇ ಸಾಲಿನಿಂದ ರೂ.3.00 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದಿದ್ದರೂ ಸಹ ಮೊದಲ ರೂ.3.00 ಲಕ್ಷಗಳ ಮೊತ್ತದ ವರೆಗಿನ ಸಾಲಗಳಿಗೆ ಶೂನ್ಯ ಬಡ್ಡಿ ದರ ಅನ್ವಯಿಸಲು ಸೂಚಿಸಲಾಗಿದೆ. |

**ಸಂಖ್ಯೆ ಸಿಒ 54 ಸಿಎಲ್‌ಎಸ್ 2022**

**(ಎಸ್. ಟಿ. ಸೋಮಶೇಖರ್)**
ಸಹಕಾರ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: ೬೮೫ ಗೆ ಅನುಬಂಧ

ದಿ.1-4-2021 ರಿಂದ ದಿ.31-3-2021 ರ ವರೆಗೆ ಸಹಕಾರ ಸಂಘಗಳು ಅಲ್ಪಾವಧಿ ಬೆಳೆ ಸಾಲ ವಿತರಿಸಿದ ವಿವರ

(ರೂ.ಲಕ್ಷಗಳಲ್ಲಿ)

| Sl No | Name of DCC Bank | Up to Rs 1 lakh | | Rs 1 lakh to Rs 2 lakhs | | Rs 2 lakh to Rs 3 lakhs | | Above Rs 3 lakhs | | Total | |
|---|---|---|---|---|---|---|---|---|---|---|---|
| | | Number | Amount | Number | Amount | Number | Amount | Number | Amount | Number | Amount |
| 1 | Bagalkot | 210859 | 93893.64 | 23651 | 32114.79 | 759 | 1633.82 | 0 | 0.00 | 235269 | 127642.25 |
| 2 | Bangalore | 97617 | 54459.62 | 716 | 895.60 | 0 | 0.00 | 0 | 0.00 | 98333 | 55355.22 |
| 3 | Belgaum | 393312 | 147296.20 | 23226 | 32714.66 | 16769 | 43695.31 | 11 | 42.56 | 433318 | 223748.73 |
| 4 | Bellary | 69572 | 41939.02 | 16639 | 22565.03 | 3420 | 8446.40 | 11 | 91.63 | 89642 | 73042.08 |
| 5 | Bidar | 140126 | 58663.37 | 9989 | 13822.59 | 4364 | 11589.34 | 0 | 0.00 | 154479 | 84075.30 |
| 6 | Bijapur | 220637 | 109474.21 | 322 | 560.98 | 4801 | 13339.99 | 0 | 0.00 | 225760 | 123375.18 |
| 7 | Chikmagalur | 9963 | 6125.23 | 24063 | 39823.65 | 8872 | 24470.65 | 112 | 923.68 | 43010 | 71343.21 |
| 8 | Chitradurga | 46403 | 22537.89 | 3666 | 5301.98 | 633 | 1671.35 | 0 | 0.00 | 50702 | 29511.22 |
| 9 | Davangere | 83624 | 26008.22 | 11936 | 14925.37 | 3971 | 8934.75 | 0 | 0.00 | 99531 | 49868.34 |
| 10 | Dharwad | 73776 | 23240.32 | 14823 | 15023.46 | 2415 | 5224.15 | 0 | 0.00 | 91014 | 43487.93 |
| 11 | Gulburga | 40538 | 10946.19 | 719 | 1821.97 | 84 | 368.87 | 0 | 0.00 | 41341 | 13137.03 |
| 12 | Hassan | 139118 | 66056.94 | 4556 | 6815.96 | 1096 | 2690.36 | 2 | 17.00 | 144772 | 75580.26 |
| 13 | Kanara | 39845 | 29030.61 | 29560 | 17285.05 | 11714 | 20567.48 | 0 | 0.00 | 81119 | 66883.14 |
| 14 | Kodagu | 15525 | 10339.73 | 10894 | 16199.05 | 11026 | 30171.05 | 484 | 1764.59 | 37929 | 58474.42 |
| 15 | Kolar | 26085 | 22212.38 | 6362 | 10747.74 | 3034 | 7440.84 | 2489 | 2141.55 | 37970 | 42542.51 |
| 16 | Mandya | 125757 | 60704.42 | 9258 | 12346.13 | 1787 | 4511.11 | 0 | 0.00 | 136802 | 77561.66 |
| 17 | Mysore | 55647 | 32226.19 | 18803 | 27164.98 | 5908 | 15486.60 | 7 | 35.00 | 80365 | 74912.77 |
| 18 | Raichur | 101723 | 44379.18 | 20908 | 9372.00 | 357 | 1378.24 | 0 | 0.00 | 122988 | 55129.42 |
| 19 | S.Canara | 85049 | 62150.95 | 33854 | 51423.90 | 17494 | 46029.52 | 0 | 0.00 | 136397 | 159604.37 |
| 20 | Shimoga | 79459 | 44637.51 | 12881 | 19990.81 | 5723 | 14727.50 | 7 | 36.60 | 98070 | 79392.42 |
| 21 | Tumkur | 105885 | 45859.85 | 3670 | 4664.06 | 576 | 1478.38 | 0 | 0.00 | 110131 | 52002.29 |
| | **Total** | **2160520** | **1012181.68** | **280496** | **355579.76** | **104803** | **263855.71** | **3123** | **5052.61** | **2548942** | **1636669.75** |